# ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಕಲಬುರಗಿ.

## ಸಮತೆಯೆಡೆಗೆ ನಮ್ಮ ನಡಿಗೆ

## ಸಾಮರಸ್ಯ, ಸಮಾನತೆ : ನಮ್ಮ ಶಿಲ್ಪಿ ನಾವೇ
## ಮಾರ್ಚ್ 7,8, 2022 ಅಂತಾರಾಷ್ಟ್ರೀಯ
## ಮಹಿಳಾ ದಿನಾಚರಣೆ, ಕಲಬುರಗಿ

'ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ'ವು ಜನಪರ, ಮಹಿಳಾಪರ ಸಂಘಟನೆಗಳ ಜಾಲವಾಗಿದ್ದು ಕಳೆದ ಎಂಟು ವರ್ಷಗಳಿಂದ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜಾಥಾ, ಸಮಾವೇಶ, ಜಾಗೃತಿ ಕಾರ್ಯಕ್ರಮ ನಡೆಸುವುದರೊಂದಿಗೆ ಜನಪರ ಹೋರಾಟಗಳಲ್ಲಿ ಸಹಭಾಗಿತ್ವ ನೀಡುತ್ತ ಬಂದಿದೆ. ಕರ್ನಾಟಕದಾದ್ಯಂತ ಮಹಿಳಾ ಚಳುವಳಿ–ಸಾಹಿತ್ಯ–ಶಿಕ್ಷಣ ಕ್ಷೇತ್ರದ ಪರಿಣಿತರು–ರಂಗಭೂಮಿ–ಜನಪದ ಹೋರಾಟಗಳಲ್ಲಿ ಸಕ್ರಿಯವಾಗಿರುವ ಅನೇಕ ವ್ಯಕ್ತಿ–ಸಂಘಟನೆಗಳು ಈ ಒಕ್ಕೂಟದೊಂದಿಗಿದ್ದಾರೆ. ಮಹಿಳಾ ಸಂಘಟನೆಗಳು, ದಲಿತ ದಮನಿತರ ಸಂಘಟನೆಗಳು, ಅಂಗನವಾಡಿ, ಪೌರಕಾರ್ಮಿಕರು, ಬಿಸಿಯೂಟ ನೌಕರರು, ಆಶಾ ಕಾರ್ಯಕರ್ತೆಯರು–ಮನೆಕೆಲಸದ ಕಾರ್ಮಿಕರು, ಗಾರ್ಮೆಂಟ್ ಮತ್ತು ಇನ್ನಿತರ ಕಾರ್ಮಿಕರ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು, ಸ್ವಯಂಸೇವಾ ಸಂಸ್ಥೆಗಳು, ಲೈಂಗಿಕ ಕಾರ್ಯಕರ್ತರು–ಲಿಂಗತ್ವ ಅಲ್ಪಸಂಖ್ಯಾತರ ಗುಂಪುಗಳು, ಲೇಖಕಿಯರ ಸಂಘ, ರಂಗಕರ್ಮಿಗಳು, ಅಕಾಡೆಮಿಕ್ ವಲಯದ ಸಮಾನ ಮನಸ್ಕರು ಮೊದಲಾಗಿ ನೂರಾರು ಸಂಘ–ಸಂಸ್ಥೆ–ಸಂಘಟನೆಗಳು ಒಕ್ಕೂಟದಲ್ಲಿ ಭಾಗಿಯಾಗಿವೆ. ಜೀವಪರ ಚಿಂತನೆಯಿರುವ, ಸಮಾನತೆಯ ಆಶಯ ಹೊಂದಿದ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಲ್ಲಿ ವಿಶ್ವಾಸ ಹೊಂದಿದ, ಸರ್ವಧರ್ಮ ಸಮಭಾವಯಿರುವ ಯಾರು ಬೇಕಾದರೂ ಒಕ್ಕೂಟದಲ್ಲಿ ಭಾಗಿಯಾಗಬಹುದು.

2012 ರಲ್ಲಿ ಮಂಗಳೂರಿನಲ್ಲಿ ಹೋಂ ಸ್ಟೇ ದಾಳಿ ಪ್ರಕರಣ ಮತ್ತು ದೆಹಲಿಯಲ್ಲಿ ನಡೆದ ನಿರ್ಭಯಾ ಅತ್ಯಾಚಾರ ಪ್ರಕರಣಗಳು ದೇಶದಾದ್ಯಂತ ಪ್ರತಿಭಟನೆ ಭುಗಿಲೇಳಲು ಕಾರಣವಾದವು. ಆ ವೇಳೆಯಲ್ಲಿ ಮಹಿಳಾ ದೌರ್ಜನ್ಯ ವೇದಿಕೆ ಮಂಗಳೂರಿನಲ್ಲಿ ರಚನೆಯಾಯಿತು. ಹೆಚ್ಚುತ್ತಿರುವ ಮಹಿಳೆಯರ ಮೇಲಿನ ಹಿಂಸೆ ಲಿಂಗ ತಾರತಮ್ಯ, ಅಸಮಾನತೆಗಳನ್ನು 'ಇನ್ನು ಸಾಕು' ಎಂಬ ಘೋಷವಾಕ್ಯವನ್ನಿಟ್ಟುಕೊಂಡು ಮಂಗಳೂರಿನಲ್ಲಿ 2013ರಲ್ಲಿ ಮೊದಲ ಸಮಾವೇಶ ನಡೆಯಿತು. ಅದೇ ದಿನ ರಾಜ್ಯದಾದ್ಯಂತಯಿರುವ

ಮಹಿಳಾಪರ ಸಂಘಟನೆಗಳು ಒಗ್ಗೂಡಿ "ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ" ನಿರ್ಮಾಣವಾಯಿತು. ಅಲ್ಲಿಂದ ಪ್ರತಿವರ್ಷ ಒಂದೊಂದು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು 'ಮಹಿಳಾ ಚೈತನ್ಯ ದಿನ'ವಾಗಿ ಆಚರಿಸುತ್ತಾ, ಮಹಿಳಾ ಜಾಗೃತಿ ಸಮಾವೇಶವನ್ನು ನಡೆಸಲಾಗುತ್ತಿದೆ. ಇದುವರೆಗೆ ಮಂಗಳೂರು, ಮೈಸೂರು, ಬೆಂಗಳೂರು, ವಿಜಯಪುರ, ಕೊಪ್ಪಳ, ಶಿವಮೊಗ್ಗ, ಧಾರವಾಡ, ಮಂಡ್ಯ, ಕೋಲಾರಗಳಲ್ಲಿ ಒಂಬತ್ತು ಸಮಾವೇಶಗಳನ್ನು ನಡೆಸಲಾಗಿದೆ. 2022ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮಗಳನ್ನು ಕಲಬುರಗಿ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

## ನಮ್ಮ ನಡಿಗೆ ಸಮತೆಯೆಡೆಗೆ :

ಲಾಭ ದೋಚುವ ಉದಾರವಾದ ಆರ್ಥಿಕತೆಯೊಂದಿಗೆ ರಾಜಕಾರಣ–ಧರ್ಮ–ಜಾತಿ ವ್ಯವಸ್ಥೆಯೂ ಕೈಜೋಡಿಸಿರುವುದರ ಪರಿಣಾಮವಾಗಿ, ಮಹಿಳೆಯರ ಮೇಲಿನ ಹಿಂಸೆಯ ಸ್ವರೂಪಗಳು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿರುವುದಷ್ಟೇ ಅಲ್ಲ, ಮಾಮೂಲಿ ವಿಷಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ, ಅನೈತಿಕ ಪೊಲೀಸ್‌ಗಿರಿ, ಮರ್ಯಾದಾಹೀನ ಹತ್ಯೆ, ಜಾತಿ ಪಂಚಾಯ್ತಿಗಳ ಮೂಲಕ ಮಹಿಳೆಯರು ಧರ್ಮ, ಕೋಮು, ಜಾತಿ ವೈಷಮ್ಯಗಳಿಗೆ ದಾಳವಾಗಿ ಬಳಕೆಯಾಗುತ್ತಿದ್ದಾರೆ. ಲಿಂಗತ್ವ ಮತ್ತು ಲೈಂಗಿಕತೆ ಕುರಿತು ವೈಜ್ಞಾನಿಕ ಮನೋಭಾವ ಬೆಳೆಸುವ ಆರೋಗ್ಯಕರ ಶಿಕ್ಷಣದ ಕೊರತೆ, ಹೆಣ್ಣು ಮಕ್ಕಳನ್ನು ಸಹಜೀವಿಯಾಗಿ ನೋಡದೆ ಸರಕಿನಂತೆ ನೋಡುವ ಪಿತೃಸಂಸ್ಕೃತಿ ಮತ್ತು ಮಾರುಕಟ್ಟೆ ಆರ್ಥಿಕತೆಗಳು ಮಹಿಳಾ ತಾರತಮ್ಯ ಮತ್ತು ದೌರ್ಜನ್ಯಗಳನ್ನು ಇಮ್ಮಡಿಗೊಳಿಸಿವೆ. ಅಧಿಕಾರ ರಾಜಕಾರಣದಲ್ಲಿ ತೊಡಗಿರುವ ಪಕ್ಷ/ಸಿದ್ಧಾಂತಗಳು ಲಿಂಗ ಸಮಾನತೆಯನ್ನು ಚುನಾವಣೆ ಪ್ರಣಾಳಿಕೆಗಳಿಗಷ್ಟೆ ಸೀಮಿತಗೊಳಿಸಿ ರಾಜಕೀಯ ಪ್ರಾತಿನಿಧ್ಯ ಒದಗಿಸಬೇಕಾದ ಸಂದರ್ಭದಲ್ಲಿ ಎಲ್ಲ ಸ್ತರದ ಮಹಿಳೆಯರಿಗೂ ತೊಡರುಗಾಲು ಹಾಕುತ್ತಿವೆ.

ಹೀಗೆ ಲಾಭಕೋರ ಆರ್ಥಿಕತೆ, ಜಾತೀಯತೆ, ಪುರುಷ ಪ್ರಾಧಾನ್ಯತೆ, ಮತಾಂಧತೆ ಮತ್ತು ಇವುಗಳಿಗೆ ಪೂರಕವಾಗಿರುವ ಅಧಿಕಾರ ರಾಜಕಾರಣವು ವಿಕೃತ ಹಿಂಸೆಯನ್ನು ಹುಟ್ಟು ಹಾಕುತ್ತಿವೆ. ಅದಕ್ಕೆ ಬಲಿಯಾಗುವವರು ಮಹಿಳೆಯರೇ ಆಗಿದ್ದಾರೆ. ಹಿಂಸೆಯನ್ನು ಇಲ್ಲವಾಗಿಸಲು ಸಮಸಮಾಜ ಕಟ್ಟಲು ಬದ್ಧರಾಗಿರುವವರೆಲ್ಲ ಸಂಘಟಿತರಾಗಬೇಕಾದ ತುರ್ತು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಇದು ಒಕ್ಕೂಟದ ಪ್ರಮುಖ ಆಶಯವೂ ಆಗಿದೆ; ಅಂತೆಯೇ 'ಸಮತೆಯೆಡೆಗೆ ನಮ್ಮ ನಡಿಗೆ' ನಮ್ಮ ಧ್ಯೇಯವಾಕ್ಯವಾಗಿದೆ.

ಭಾರತದ ಮಹಿಳೆಯರು ತಮ್ಮ ಕುಟುಂಬಗಳ ಜೊತೆಜೊತೆಗೆ ದೇಶಕಟ್ಟುವ ಕೆಲಸದಲ್ಲೂ ಸಕ್ರಿಯವಾಗಿ ತೊಡಗಿದವರು. ಸ್ವಾತಂತ್ರ್ಯ ಬರುವುದಕ್ಕೆ ಮೊದಲಿನಿಂದಲೂ ಸಾವಿತ್ರಿಬಾಯಿ ಫುಲೆಯವರಂತಹ ಹತ್ತಾರು ಧೀಮಂತೆಯರು ರಚನಾತ್ಮಕವಾದ ಸಮಾಜ ನಿರ್ಮಾಣಕ್ಕಾಗಿ ತಮ್ಮನ್ನು ತಾವು ತೆತ್ತುಕೊಂಡಿದ್ದಾರೆ. ಸ್ವಾತಂತ್ರ್ಯ ಚಳವಳಿಯಲ್ಲೂ ಜಾತಿ, ಮತ, ಧರ್ಮ, ಭಾಷೆಗಳ ಹಂಗು ತೊರೆದು ಭಾರತೀಯ ಮಹಿಳೆಯರು ಆಂದೋಲನಕ್ಕೆ ಶಕ್ತಿ ತುಂಬಿದ್ದರಲ್ಲಿ ಎರಡು ಮಾತಿಲ್ಲ. ಸ್ವಾತಂತ್ರ್ಯ ಆಂದೋಲನ ಮತ್ತು ಸಂವಿಧಾನದ ಆಶಯಗಳಿಗೆ ತಕ್ಕಂತೆ ಈ ದೇಶವನ್ನು ಕಟ್ಟಿ, ಬೆಳೆಸುವುದಕ್ಕೆ ನಾವು ಈಗಲೂ ಬದ್ಧರಾಗಿದ್ದೇವೆ. ವಿಶ್ವ ಸಹೋದರಿತ್ವದ ಪರಿಕಲ್ಪನೆಯನ್ನು ನಂಬುವ ಮಹಿಳಾ ಚಳವಳಿಯು ಮತ–ಧರ್ಮಗಳ ಆಧಾರದಲ್ಲಿ

ಸಮಾಜ ಒಡೆಯುವುದನ್ನು ಖಂಡಿಸುತ್ತದೆ. ಸರ್ವರ ಸಮಾನತೆ, ಏಳಿಗೆಯನ್ನು ಸಾಧಿಸಬಯಸುವ ಸಂವಿಧಾನದಲ್ಲಿ ನಂಬಿಕೆ ಇರಿಸಿರುವವರೆಲ್ಲರೂ ಸರ್ವಜನಾಂಗದ ಶಾಂತಿಯ ತೋಟವಾದ ಭಾರತದ ಪ್ರಜೆಗಳು ಎಂಬುದು ನಮ್ಮ ಅಚಲ ನಂಬಿಕೆಯಾಗಿದೆ.

ಇಂಥ ಆಶಯಗಳನ್ನು ಹೊತ್ತು ಒಕ್ಕೂಟವು ಈ ಬಾರಿ ಕಲಬುರಗಿ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲು ಮುಂದಾಗಿದೆ. ಇದಕ್ಕೆ ಪೂರ್ವಭಾವಿಯಾಗಿ 'ಅರಿವಿನ ಪಯಣ' ಎಂಬ ಲಿಂಗ ಸೂಕ್ಷ್ಮತೆ ಬೆಳೆಸುವ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಮಹಿಳೆಯರ ಮೇಲಿನ ಹಿಂಸೆಯನ್ನು ಪ್ರತಿಭಟಿಸುವ 'ವಿಮೆನ್ ಇನ್ ಬ್ಯಾಕ್' ಎಂಬ ಮೌನ ಜಾಗೃತಿ ಕಾರ್ಯಕ್ರಮವನ್ನು **'ಸರ್ವಜನಾಂಗದ ಶಾಂತಿಯ ದೇಶ'** ಎಂಬ ಘೋಷವಾಕ್ಯದೊಂದಿಗೆ ಎಲ್ಲಾ ತಾಲೂಕುಗಳಲ್ಲೂ ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಇದರಲ್ಲಿ ಜಿಲ್ಲೆಯ ಪ್ರಗತಿಪರ ಸಂಘಟನೆಗಳು ಹಾಗೂ ಸಮಾನ ಮನಸ್ಕ ಸೋದರಿ–ಸೋದರರು ಜೊತೆಗೂಡಲಿದ್ದಾರೆ.

ಶಾಸನಗಳಲ್ಲಿ "ಕಲಂಬುರಗಿ" ಎಂದು ಉಕ್ತವಾಗಿರುವ ಈ ಜಿಲ್ಲೆಯು ಮಧ್ಯಕಾಲೀನ ಸಂದರ್ಭದಲ್ಲಿ ಗುಲಬರ್ಗಾ ಎಂದು ನಾಮಾಂಕಿತಗೊಂಡು ಈಗ ಮತ್ತೆ ಕಲಬುರಗಿ ಎಂದು ಮರುನಾಮಕರಣಗೊಂಡಿದೆ. ಹೆಸರು ಏನೇ ಇರಲಿ, ಇಲ್ಲಿನ ಉಸಿರು ಮಾತ್ರ ಸೌಹಾರ್ದತೆ ಮತ್ತು ಸಮಾನತೆ ಎಂಬುದು ಉತ್ಪ್ರೇಕ್ಷೆ ಏನಲ್ಲ. ತಥಾಗತ ಅಶೋಕನ ಪ್ರಯೋಗ ಭೂಮಿಯಾಗಿದ್ದ ಸನ್ನತಿ, ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಬಸವಾದಿ ಕಾಯಕಜೀವಿಗಳ ಕಲ್ಯಾಣದ ಹೆಬ್ಬಾಗಿಲು, ತತ್ವಪದಗಳ ಟಂಕಶಾಲೆಯಾಗಿದ್ದ ಕಡಕೋಳ, ಪ್ರಯೋಗಶೀಲ ಕೃಷಿಕ ಶರಣಬಸವನ ನೆಲಮನೆ, ಕ್ರಿ.ಶ. 14ನೇ ಶತಮಾನದಲ್ಲಿಯೇ ಸೂಫಿತನದ ಗಮಲು ಹರಡಿದ ಗೇಸುದರಾಜ ಖ್ವಾಜಾ ಬಂದೇನವಾಜ್‌ರ ಪ್ರಯೋಗಭೂಮಿಯಾಗಿ ಕಂಗೊಳಿಸಿದೆ. ದಟ್ಟ ಕಪ್ಪು ನೆಲ, ಸೊಕ್ಕಿದ ಸೂರ್ಯ ಪ್ರತಾಪಕ್ಕೆ ತುಂಬಿ ಚೆಲ್ಲ್ಯಾಡುವ ತೊಗರಿಯ ಕಣಜ. ಅಪ್ಪಟ ಮಣ್ಣಿನ ಮಕ್ಕಳ ಜವಾರಿ ಕನ್ನಡ. ಕವಿರಾಜಮಾರ್ಗಕಾರನ ಕಾಲಕ್ಕೆ ಕುರಿತೋದದೆಯು ಕಾವ್ಯ ಪ್ರಯೋಗ ಪರಿಣಿತಮತಿಗಳಿಂದ ಇಡುಕಿರಿದ ಈ ನೆಲದಲ್ಲಿ ಸೃಜನಶೀಲ ಪ್ರತಿಭೆಗೆ ಬರವಿಲ್ಲ. ಆಧುನಿಕೋತ್ತರದ ಈ ಆಯೋಮಯ ಕಾಲಘಟ್ಟದಲ್ಲಿಯೂ ಡಿಪ್ಲೋಮಸಿಯ ಸೋಂಕಿರದ ಭೋಳೆತನ ಇಲ್ಲಿನದು. "ನಡುವೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣು ಅಲ್ಲ ಕಾಣಾ ರಾಮನಾಥ" ಎಂದು ಜಗತ್ತಿಗೆ ಲಿಂಗ ಸಮಾನತೆಯನ್ನು ದಾರ್ಶನಿಕವಾಗಿ ಎತ್ತಿ ತೋರಿಸಿದ್ದ, ಅಸಂಖ್ಯ ಕಾಯಕಜೀವಿಗಳು ಸೇರಿ ಸಮಸಮಾಜದ ನಿರ್ಮಾಣಕ್ಕಾಗಿ ಅರಿವಿನ ಆಂದೋಲನಗೈಯ್ದ ಈ ನಾಡಿನಲ್ಲಿ ಬಹುತೇಕ ಜೀವಪರ ಚಳವಳಿಗಳು ನಡೆದಿವೆ. ಡಾ. ಬಾಬಾಸಾಹೇಬ ಅಂಬೇಡ್ಕರರು ಭೇಟಿ ನೀಡಿದ್ದ ಈ ನೆಲದಲ್ಲಿ ಪ್ರಬಲ ದಲಿತ ಚಳವಳಿ ರೂಪುಗೊಂಡಿದೆ. ಕಲಬುರಗಿಯು ಹಲವಾರು ಕಾರ್ಮಿಕ ಮುಂದಾಳುಗಳ ನೆಲೆಯಾಗಿದೆ. ಬಂಡಾಯ, ರೈತ, ದಲಿತ, ಕೋಮುಸೌಹಾರ್ದವೇ ಮೊದಲಾದ ಚಳವಳಿಗಳೂ ಜಿಲ್ಲೆಯಲ್ಲಿ ಆಳವಾದ ನೆಲೆ ಕಂಡುಕೊಂಡು ವಿಸ್ತಾರಗೊಂಡಿವೆ. ಅದರ ಮುಂದುವರಿಕೆ ಎಂಬಂತೆ ಇವತ್ತು ಸಶಕ್ತ ಹೋರಾಟಗಾರರು ಮಹಿಳಾ ಮತ್ತು ಯುವ ಮುಂದಾಳುಗಳು ಕಂಡುಬರುತ್ತಾರೆ. ಇಂಥಲ್ಲಿ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2021–22ರಲ್ಲಿ ಸಮಾನ ಮನಸ್ಕ ಸಂಘಟನೆ, ಸಂಸ್ಥೆ, ವ್ಯಕ್ತಿಗಳೊಡಗೂಡಿ ಮಹಿಳಾ ಸಮಾನತೆಗಾಗಿ ಅರಿವಿನ ಪಯಣ, ಸಮಾವೇಶ ನಡೆಸುತ್ತಿರುವುದು ಚಾರಿತ್ರಿಕ ಮೈಲುಗಲ್ಲಾಗಿದೆ. ಕಲಬುರಗಿಯು ಕರ್ನಾಟಕದ ಮೂಲೆಮೂಲೆಗಳಿಂದ ಎಲ್ಲ ಸಹೋದರಿಯರನ್ನು, ಮಾನವೀಯ ಮನಸ್ಸುಗಳನ್ನು ಸ್ವಾಗತಿಸಲು ಸಜ್ಜಾಗಿದೆ.

**ನಮ್ಮ ಹಕ್ಕೊತ್ತಾಯಗಳು :**

1. ಸಾಂವಿಧಾನಿಕ ಮೌಲ್ಯಗಳು ಸ್ಥಾಪಿತಗೊಂಡು ಸೆಕ್ಯುಲರ್ ಭಾರತ ಬಲಗೊಳ್ಳಬೇಕು
2. ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಸಿದ್ಧಾಂತ, ಭಾಷೆಗಳ ಹೆಸರಿನಲ್ಲಿ ಮಹಿಳೆಯರ ಮೇಲೆ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳು ನಿಲ್ಲಬೇಕು.
3. ನೆನೆಗುದಿಗೆ ಬಿದ್ದಿರುವ ಮಹಿಳಾ ಮೀಸಲಾತಿ ಮಸೂದೆ ಕಾಯ್ದೆ ಆಗಬೇಕು ಮತ್ತು ಕಡ್ಡಾಯವಾಗಿ ಜಾರಿಗೆ ಬರಬೇಕು.
4. ಹೆಣ್ಣು ಭ್ರೂಣ ಪತ್ತೆ ಮತ್ತು ಹತ್ಯೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು.
5. ಬಾಲ್ಯವಿವಾಹ, ಗುಜ್ಜರ್ ಕಿ ಶಾದಿ (ಮದುವೆ), ಮರ್ಯಾದೆಗೇಡು ಹತ್ಯೆ ಮತ್ತು ವರದಕ್ಷಣೆ ಹಿಂಸೆ ದೌರ್ಜನ್ಯಗಳು ಕೊನೆಯಾಗಬೇಕು.
6. ದೇವದಾಸಿ ಪದ್ಧತಿ ನಿಷೇಧ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಅವರ ಪುನರ್ವಸತಿಗೆ ಕ್ರಮ ಕೈಗೊಳ್ಳಬೇಕು.
7. ಅಶ್ಲೀಲ ಸಾಹಿತ್ಯ ಸಿನಿಮಾ ಜಾಲತಾಣಗಳನ್ನು ನಿಷೇಧಿಸಬೇಕು.
8. ಲಿಂಗಸಮಾನತೆ ದೃಷ್ಟಿಕೋನದ ಪಠ್ಯಗಳು ಎಲ್ಲೆಡೆ ರಚನೆಯಾಗಬೇಕು.
9. ಆರೋಗ್ಯಕರ ಲೈಂಗಿಕ ಶಿಕ್ಷಣ ಜಾರಿ ಆಗಬೇಕು.
10. 12 ರಿಂದ 18 ವರ್ಷದವರೆಗಿನ ಹೆಣ್ಣುಮಕ್ಕಳಿಗೆ ಉಚಿತ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು.
11. ಯುವತಿ/ಮಹಿಳೆಯರಿಗೆಲ್ಲರಿಗೂ ಪರಿಸರ ಸ್ನೇಹಿ ಉಚಿತ ನ್ಯಾಪ್‌ಕಿನ್‌ಗಳನ್ನು ಸರಕಾರ ಪೂರೈಸಬೇಕು.
12. ಪ್ರತಿ ಜಿಲ್ಲೆಯಲ್ಲಿ ಅತ್ಯಾಚಾರ ತಡೆ ಕಾವಲು ಸಮಿತಿ ರಚನೆಯಾಗಬೇಕು.
13. ತ್ವರಿತ ನ್ಯಾಯಾಲಯಗಳ ಸ್ಥಾಪನೆಯಾಗಿ ಶೀಘ್ರ ನ್ಯಾಯ ದೊರೆಯುವಂತಾಗಬೇಕು.
14. ಪೋಕ್ಸೋ ಕಾಯಿದೆ ಬಲಪಡಿಸಬೇಕು.
15. ಮಹಿಳೆ ಮತ್ತು ಮಕ್ಕಳ ಸಾಗಾಟ ತಡೆಗೆ ಕ್ರಮ ಕೈಗೊಳ್ಳಬೇಕು.
16. ಮುಟ್ಟಿನ ಹೆಸರಿನಲ್ಲಿ ಮಹಿಳೆಯರನ್ನು ಅಗೌರವಿಸುವ, ಹೊರಗಿಡುವ ಶೋಷಿಸುವಂತಹ ಮೌಢ್ಯಾಚರಣೆಗಳ ತಡೆಗಾಗಿ ಜಾಮೀನುರಹಿತ ಕಾಯಿದೆ ರಚನೆಯಾಗಬೇಕು.
17. ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಗೊಳಿಸಿ, ಯೋಜನಾ ಹಣದ ಬಳಕೆಗೆ ಕಾವಲು ಸಮಿತಿ ರಚಿಸಬೇಕು.
18. ಲಿಂಗತ್ವ ಅಲ್ಪಸಂಖ್ಯಾತರ, ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳ ಉಲ್ಲಂಘನೆ ಮತ್ತು ಅಪರಾಧೀಕರಣ ತಡೆಯಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕ ಮತ್ತು ನೀತಿ ನಿರೂಪಣಾ ಸ್ಥಾನಗಳಲ್ಲಿ ಅವರ ಪ್ರಾತಿನಿಧ್ಯ ಕಡ್ಡಾಯಗೊಳಿಸಬೇಕು.

19. ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆಯರ ಉದ್ಯೋಗ ಖಾಯಂ ಗೊಳಿಸಬೇಕು.
20. ಗಾರ್ಮೆಂಟ್ಸ್ ನೌಕರರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು ಹಾಗೂ ಇನ್ನಿತರ ಎಲ್ಲ ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ನೀಡಬೇಕು.
21. ಜನರ ವಲಸೆ ತಡೆಗಟ್ಟಿ ಸ್ಥಳೀಯವಾಗಿಯೇ ಉದ್ಯೋಗದ ಭದ್ರತೆ ಒದಗಿಸಬೇಕು.
22. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆಯನ್ನು ನಗರಕ್ಕೂ ವಿಸ್ತರಿಸಿ ಎರಡು ನೂರು ದಿನಗಳು ಮತ್ತು ದಿನಕ್ಕೆ ಆರು ನೂರು ರೂಪಾಯಿ ಕೂಲಿ ಒದಗಿಸಬೇಕು.
23. ಮಲ ಎತ್ತುವ ಪದ್ಧತಿ ನಿಷೇಧ ಕಾಯ್ದೆಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಉಲ್ಲಂಘಿಸಿದವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು.
24. ಅಸ್ಪೃಶ್ಯತಾ ತಡೆ ಕಾಯಿದೆ ಬಲಗೊಳಿಸಿ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು.
25. ಮದ್ಯವ್ಯಸನ ಮುಕ್ತ ಕರ್ನಾಟಕ ನಮ್ಮ ಆಗ್ರಹ.
26. ಭೂಸುಧಾರಣೆ ತಿದ್ದುಪಡಿ ಕಾಯಿದೆ ರದ್ದಾಗಬೇಕು.
27. ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ ನಿಲ್ಲಬೇಕು.
28. ಅವೈಜ್ಞಾನಿಕ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹಿಂಪಡೆಯಬೇಕು.
29. ರೈತರು ಬೆಳೆದ ಬೆಳೆಗೆ ಕನಿಷ್ಠ ವೈಜ್ಞಾನಿಕ ಬೆಂಬಲ ಬೆಲೆ ನಿಗದಿಪಡಿಸಿ ಕಾಯಿದೆಯಾಗಿಸಬೇಕು.

**ಸಹಭಾಗಿ ಸಂಘಟನೆಗಳು**

ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಮಂಗಳೂರು, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಕೊಪ್ಪಳ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ದಲಿತ ಕಲಾ ಮಂಡಳಿ ಗದಗ, ದಲಿತ ಬಹುಜನ ಚಳವಳಿ ಗದಗ, ವಿಮೋಚನ ಬೆಂಗಳೂರು, ವಿಮೆನ್ಸ್ ವಾಯ್ಸ್, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಪಿ.ಯು.ಸಿ.ಎಲ್, ಮಹಿಳಾ ಮುನ್ನಡೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ದಲಿತ ದಮನಿತರ ಸ್ವಾಭಿಮಾನ ಹೋರಾಟ ಸಮಿತಿ, ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘ–ದಕ್ಷಿಣ ಕನ್ನಡ, ಗಮನ ಮಹಿಳಾ ಸಮೂಹ, ಸಿಐಈಡಿಎಸ್, ದೇಶಕ್ಕಾಗಿ ನಾವು, ಅತ್ಯಾಚಾರ ವಿರೋಧಿ ಪ್ರಚಾರಾಂದೋಲನ, ಕರ್ನಾಟಕ ಪ್ರಾಂತ ರೈತ ಸಂಘ, ಸ್ಪಂದನ ಮಂಡ್ಯ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ಸ್ ವರ್ಕರ್ಸ್ ಯೂನಿಯನ್, ಸಾಧನಾ ಮಹಿಳಾ ಗುಂಪು ಬೆಂಗಳೂರು, ವಿಮೋಚನ ಸಂಘ ಅಥಣಿ, ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಆಲ್ ಇಂಡಿಯಾ ಪ್ರೊಗ್ರೆಸ್ಸಿವ್ ವಿಮೆನ್ಸ್ ಅಸೋಸಿಯೇಷನ್, ಕರ್ನಾಟಕ ದಲಿತ ಮಹಿಳಾ ವೇದಿಕೆ, ದಲಿತ ಬಹುಜನ ಚಳವಳಿ, ನ್ಯಾಶನಲ್ ಫೆಡರೇಷನ್ ಆಫ್ ಇಂಡಿಯನ್

ವಿಮೆನ್, ಭಾರತೀಯ ಮಹಿಳಾ ಒಕ್ಕೂಟ, ಮಾನಿನಿ, ಗಾರ್ಮೆಂಟ್ಸ್ ಲೇಬರ್ ಯೂನಿಯನ್ ಮುನ್ನಡೆ, ಸ್ತ್ರೀ ಜಾಗೃತ ಸಮಿತಿ, ಚರಕಾ ಮಹಿಳಾ ವಿವಿಧೋದ್ದೇಶ ಸಂಘ ಹೆಗ್ಗೋಡು, ಸಖೀ ಹೊಸಪೇಟೆ, ಎಸ್.ಎಫ್.ಐ., ಡಿವೈಎಫ್ಐ, ಎಐಟಿಯುಸಿ, ಸಿಐಟಿಯು, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ ಬೆಂಗಳೂರು, ಪರ್ಯಾಯ ಕಾನೂನು ವೇದಿಕೆ, ಅನೇಕ ಬೆಂಗಳೂರು, ಜೀವ ಬೆಂಗಳೂರು, ಒಂದೆಡೆ ಬೆಂಗಳೂರು, ಸ್ವರಾಜ್ ನೆಟ್‌ವರ್ಕ್, ಯೂತ್ ಎಂಪವರ್ಡ್ ಇನ್ ಆಕ್ಷನ್ ಫಾರ್ ಕಮ್ಯುನಿಟಿ, ರೇಡಿಯೋ ಆಕ್ಟಿವ್ ಬೆಂಗಳೂರು, ಪ್ರಜಾ ರಾಜ್ಯ ವೇದಿಕೆ, ವಿಸ್ತಾರ್, ಜನಸಹಯೋಗ, ತರಿಕಿಟ ಕಲಾ ಕಮ್ಮಟ ಮಂಗಳೂರು, ಸಂಚಲನ ಕರ್ನಾಟಕ, ಸಂವಾದ, ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ಸ್ಲಂ ಜನಾಂದೋಲನ ಸಮಿತಿ, ಬಿ.ಬಿ.ಎಂ.ಪಿ. ಗುತ್ತಿಗೆ ಪೌರಕಾರ್ಮಿಕರ ಸಂಘಟನೆ, ಎಐಸಿಟಿಯು, ಪಯಣ, ಸಮಾಜವಾದಿ ಜನಪರಿಷದ್, ಕರ್ನಾಟಕ ಜನಶಕ್ತಿ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಫೋರಂ ಫಾರ್ ವರ್ಕರ್ಸ್ ರೈಟ್ಸ್, ದೇವದಾಸಿ ಮಹಿಳೆಯರ ಸಂಘಟನೆ ಬೆಳಗಾವಿ, ಭೂಮಿತಾಯಿ ಬಳಗ ದೊಡ್ಡಬಳ್ಳಾಪುರ, ಕವಿ ಪ್ರಕಾಶನ ಕವಲಕ್ಕಿ, ಲಡಾಯಿ ಪ್ರಕಾಶನ ಗದಗ, ಸಬಲ ವಿಜಯಪುರ, ಉಜ್ವಲ ಸಂಸ್ಥೆ ವಿಜಯಪುರ, ಫೆಡಿನಾ, ದಲಿತ ಜನಸೇನೆ ಮಹಿಳಾ ಒಕ್ಕೂಟ, ಎಪಿಡಿ ಸಂಸ್ಥೆ, ಅನೌಪಚಾರಿಕ ಶಿಕ್ಷಣ ಸಂಸ್ಥೆ, ಏಯ್ಡ್ಸ್ ಜಾಗೃತಿ ಮಹಿಳಾ ಸಂಸ್ಥೆ, ಚೈತನ್ಯ ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ವಿಜಯಪುರ, ಮಹಿಳಾ ಸಮಖ್ಯಾ, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಅಂಗವಿಕಲರ ಐಕ್ಯತಾ ವೇದಿಕೆ, ನವಸ್ಫೂರ್ತಿ ಸಂಸ್ಥೆ ವಿಜಯಪುರ, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ ಕರ್ನಾಟಕ, ಸೇವಾ, ನವಜೀವನ ಮಹಿಳಾ ಒಕ್ಕೂಟ ರಾಯಚೂರು, ಮದ್ಯ ನಿಷೇಧ ಆಂದೋಲನ, ರಂಗಬೆಳಕು ತಂಡ ಶಿವಮೊಗ್ಗ, ಅಹರ್ನಿಶಿ ಪ್ರಕಾಶನ ಶಿವಮೊಗ್ಗ, ದಿ ಶಿವಮೊಗ್ಗ ಮಲ್ಟಿ ಪರ್ಪಸ್ ಸೋಶಿಯಲ್ ಸರ್ವಿಸ್ ಸೊಸೈಟಿ, ನಿರಂತರ–ಶಿವಮೊಗ್ಗ, ಹೊಸ ಮನುಷ್ಯ ಪತ್ರಿಕಾ ಬಳಗ, ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನ–ಶಿವಮೊಗ್ಗ, ಚಾರ್ವಾಕ ಪತ್ರಿಕಾ ಬಳಗ–ಸಾಗರ, ಸ್ಪಂದನ (ರಿ) ಸಾಗರ, ಯುವಕ ಯುವತಿಯರ ಸಂಘ – ಗಾಜನೂರು, ಜಾಗೃತ ಮಹಿಳಾ ಒಕ್ಕೂಟ, ಖಾನಾಪುರ.

## ಕಲಬುರಗಿ ಸಂಘಟನೆಗಳು:

**ವಿ ಜಿ ಮಹಿಳಾ ಕಾಲೇಜು, ಗೋದುತಾಯಿ ಕಾಲೇಜು, ಬೀಬೀ ರಜಾ ಕಾಲೇಜು, ಸರಕಾರಿ ಮಹಿಳಾ ಕಾಲೇಜು, ಪಿಲ್ಲೂ ಮಹಿಳಾ ಕಾಲೇಜು, ಸರಕಾರಿ ಆಯ್ ಟಿ ಆಯ್ ಕಾಲೇಜು, ದಲಿತ ಸಂಘರ್ಷ ಸಮಿತಿ, ಕರ್ನಾಟಕ ಗೃಹ ಕಾರ್ಮಿಕರ ಯುನಿಯನ್, ರಿಪಬ್ಲಿಕನ್ ಯುಥ್ ಫೆಡರೇಷನ್, ಮೈತ್ರಿ ಫೌಂಡೇಷನ್, ಸಂವಾದ, ಸ್ಲಂ ಜನಾಂದೋಲನ, ಸಮುದಾಯ, ಭಾರತ ಜ್ಞಾನ ವಿಜ್ಞಾನ ಸಮಿತಿ, ಅಜೀಂ ಪ್ರೇಮಜಿ ಫೌಂಡೇಷನ್, ಪ್ರಬುದ್ಧ ಭಾರತ ಸಂಘರ್ಷ ಸಮಿತಿ, ದಲಿತ ಹಕ್ಕುಗಳ ಹೋರಾಟ ಸಮಿತಿ, ಸೇವಾ ಸಂಗಮ ಸಂಸ್ಥೆ, ಹೈದ್ರಾಬಾದ ಕರ್ನಾಟಕ ಸರಕಾರಿ ಕಾಲೇಜು ಅಧ್ಯಾಪಕರ ಸಂಘ, ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘಟನೆ, ಸ್ನೇಹಾ ಸಂಸ್ಥೆ, ಡಾ ಬಾಬು ಜಗಜೀವನರಾವ್ ಆದಿ ಜಾಂಬವ ಯುವ ಬ್ರಿಗ್ರೇಡ್ ಮಹಿಳಾ ಘಟಕ, ಕಲಬುರಗಿ, ವರ್ಣಿಕಾ, ಕೃತಿಕಾ.**

## ಕಲಬುರಗಿಯಲ್ಲಿ ದಿನಾಂಕ 21–2–2022 ರಿಂದ 8–3–2022 ರವರೆಗೆ ನಡೆಯುವ ಸರಣಿ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರಿ.

## ಅರಿವಿನ ಪಯಣ ಜಾಥಾದ ವೇಳಾ ಪಟ್ಟಿ

| ಕ್ರ. ಸಂಖ್ಯೆ | ದಿನಾಂಕ | ಸ್ಥಳ |
|---|---|---|
| 1 | 21–2–2022 | ಚಿಂಚೋಳಿ |
| 2 | 22–2–2022 | ಆಳಂದ |
| 3 | 23–2–2022 | ಜೇವರ್ಗಿ |
| 4 | 24–2–2022 | ಅಫಜಲಪೂರ |
| 5 | 25–2–2022 | ಸೇಡಂ |
| 6 | 26–2–2022 | ಕಮಲಾಪೂರ |
| 7 | 27–2–2022 | ವಿವಿಧ ಸ್ಪರ್ಧೆಗಳು, ಸೇಂಟ್ ಮೇರಿ ಚರ್ಚ ಆವರಣ, ಕಲಬುರಗಿ |
| 8 | 28–2–2022 | ಚಿತ್ತಾಪೂರ, ವಾಡಿ |
| 9 | 1–3–2022 | ಬುದ್ಧನಗರ, ಪಂಚಶೀಲ ನಗರ, ಇಂದಿರಾ ನಗರ, ಕಲಬುರಗಿ ಸಾಯಂಕಾಲ 5 ಗಂಟೆಗೆ |
| 10 | 2–3–2022 | ಸಿದ್ದಾರ್ಥ ನಗರ, ಕಾಂತಾ ಕಾಲನಿ, ಎಂ.ಎಸ್. ಕೆ ಮಿಲ್, ಸಾಂ–5 ಗಂಟೆ ಹೀರಾಪೂರ ಮದ್ಯಾಹ್ನ 1 ಗಂಟೆ |
| 11 | 2–3–2022 | ತಾಜ್ ಸುಲ್ತಾನಪೂರ ಮುಂ 11 ಗಂಟೆಗೆ |
| 12 | 3–3–2022 | ರೇವಣಸಿದ್ದೇಶ್ವರ ನಗರ, ಸಾಂ 5 ಗಂಟೆಗೆ ಸಿದ್ದಾರೂಢ ಕಾಲನಿ, ಸಾಂ 6 ಗಂಟೆಗೆ |
| 13 | 4–3–2022 | ಸಂಜಯಗಾಂಧೀ ನಗರ, ರಾಜೀವ ಗಾಂಧೀ ನಗರ, ಆರ್ಯ ನಗರ, ಲಂಗರ್ ಹನುಮಾನ ನಗರ, ಸಾಂ 5 ಗಂಟೆಗೆ |
| 14 | 5–3–2022 | ಜೇವರ್ಗಿಕಾಲನಿ ಶಾಲೆ, ಕಲಬುರಗಿ ಸಾಂ. 4 ಗಂಟೆಗೆ ಮುಸ್ಲಿಂ ಸಂಘ ಸಾಂ 6 ಗಂಟೆಗೆ |
| 15 | 6–3–2022 | ಬೋರಾಬಾಯಿ ನಗರ, ಒಡ್ಡರಗಲ್ಲಿ, ರಾಮಜೀ ನಗರ, ಸಾಂ. 5 ಗಂಟೆಗೆ. ಖಾನಾಪೂರ, ಉಮರ್ ಕಾಲನಿ ಸಾಂ. 6 ಗಂಟೆಗೆ |
| 16 | 7–3–2022 | ವುಮೆನ್ ಇನ್ ಬ್ಲ್ಯಾಕ್ ಮೌನ ಪ್ರತಿಭಟನೆ, ಜಗತ್ ವೃತ್ತ, ಕಲಬುರಗಿ |
| 17 | 8–3–2022 | ರಾಷ್ಟ್ರೀಯ ವಿಚಾರ ಸಂಕಿರಣ, ಪೂಜ್ಯಶ್ರೀ ಬಸವರಾಜಪ್ಪ ಅಪ್ಪ ಸಭಾಂಗಣ, ಶರಣ ನಗರ ಕಲಬುರಗಿ |

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
# ಕಾರ್ಯಕ್ರಮಗಳ ವಿವರ

**ಮಾರ್ಚ್ 7, 2022ರ ಸೋಮವಾರ** ಸಾಯಂಕಾಲ 4–30ಕ್ಕೆ ಕನ್ನಡ ಭವನದಿಂದ ಜಗತ್ ಸರ್ಕಲ್ ತನಕ **ಮೆರವಣಿಗೆ** ನಡೆಯಲಿದೆ. ಬಳಿಕ ಬೆಳಕಿನೊಂದಿಗೆ ಮೌನ ಸಂದೇಶ **'ಕಪ್ಪು ಉಡುಗೆಯಲ್ಲಿ ಮಹಿಳೆಯರು'** ಮೌನ ಜಾಗೃತಿ ಕಾರ್ಯಕ್ರಮ 'ಸರ್ವ ಜನಾಂಗದ ಶಾಂತಿಯ ದೇಶ' ಘೋಷವಾಕ್ಯದೊಂದಿಗೆ.

**ಮಾರ್ಚ್ 8, 2022ರ ಮಂಗಳವಾರ 'ಸ್ವಾತಂತ್ರ್ಯ 75: ಮಹಿಳಾ ಹಕ್ಕುಗಳು'** ಎಂಬ ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ. ಕಲಬುರಗಿ ಸೀಮೆಯ ಹೆಮ್ಮೆಯ ಬರಹಗಾರ್ತಿ **ಗೀತಾ ನಾಗಭೂಷಣ ಹೆಸರಿನ ವೇದಿಕೆ, ಹಾಗೂ ಭಾರತದ ಖ್ಯಾತ ಸ್ತ್ರೀವಾದಿ ಚಿಂತಕಿ, ಹೋರಾಟಗಾರ್ತಿ ಕಮಲಾ ಭಾಸಿನ್ ಹೆಸರನ್ನು ದ್ವಾರಕ್ಕೆ** ಇಡಲಾಗಿದೆ. ಮುಖ್ಯ ಅತಿಥಿಯಾಗಿ **ಶ್ರೀಮತಿ ಪುಟ್ಟೀರಮ್ಮ,** ರೈತ ಹೋರಾಟಗಾರ್ತಿ, ಚಾಮರಾಜನಗರ ಪಾಲ್ಗೊಳ್ಳುವರು. **ಮರಿಯಂ ಧಾವಳೆ,** ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ದೆಹಲಿ ಇವರು **ದಿಕ್ಸೂಚಿ** ಮಾತನಾಡುವರು. ಬಳಿಕ ರಾಜ್ಯದಾದ್ಯಂತದ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರ ಮಂಡನೆ, ಸಂವಾದ ನಡೆಯುವುದು.

## ತಮಗೆಲ್ಲರಿಗೂ ಆತ್ಮೀಯ ಸ್ವಾಗತ

**ಮಹಿಳೆಯರೇ, ಮಹಿಳಾ ಪರ ಮನಸುಗಳೇ, ಬನ್ನಿ.**
**ಸಮತೆ ಸಾಮರಸ್ಯದ ನಾಡ ಕಟ್ಟೋಣ.**
**ನಮ್ಮ ಕನಸುಗಳನ್ನು ಸಾಕಾರವಾಗಿಸಲು ಒಗ್ಗೂಡಿ ಹೆಜ್ಜೆಯಿಡೋಣ.**

(ವಿ.ಸೂ.: ಮೆರವಣಿಗೆಯಲ್ಲಿ ಭಾಗವಹಿಸುವ ಎಲ್ಲ ಸಹಭಾಗಿಗಳು ತಂತಮ್ಮ ಬ್ಯಾನರ್ ತಂದುಕೊಳ್ಳಬೇಕು.)

**ಸಂಪರ್ಕ ಸಂಖ್ಯೆ:**
**ಮೊ. : 9880983524 – 9448651433 – 9980588403**
**9448483340**